ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ ಕಾರಟಗಿ (ಸಂಚಾರಿ ಪೀಠ).

ಸಿ. ಸಿ. ನಂ : **1813/2020**

ರಾಜ್ಯ ಪರಃ ಕಾರಟಗಿ ಪೋಲಿಸ ಠಾಣೆ

ಃವಿರುದ್ಧಃ

ಸಿದ್ದಪ್ಪ ಮತ್ತು ಇತರರು

<u>ದೋಷಾರೋಪಣೆ</u>

**ಮೇಘಾ ಸೋಮಣ್ಣವರ, ಬಿ.ಬಿ.ಎ., ಎಲ್.ಎಲ್.ಬಿ, ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಕೆಳಕಂಡ ಆರೋಪಿಗಳಾದಃ-**

**1.** ಸಿದ್ದಪ್ಪ ತಂದೆಃ ರಂಗಣ್ಣ ಮೆಳಗೇರಿ, ವಯಸ್ಸುಃ **26** ವರ್ಷ, ಉಃ ಕೂಲಿ, ಸಾಃ ಹೊನ್ನೂರಸಾಬ ದರ್ಗಾ ಹತ್ತಿರ, ಕುರಗೋಡ, ತಾಃ ಬಳ್ಳಾರಿ.

**2.** ಗಂಗಮಾಳಮ್ಮ ಗಂಡ ರಂಗಣ್ಣ ಮೆಳಗೇರಿ, ವಯಸ್ಸುಃ **47** ವರ್ಷ, ಉಃ ಮನೆಗೆಲಸ, ಸಾಃ ಹೊನ್ನೂರಸ್ವಾಮಿ ದರ್ಗಾ ಹತ್ತಿರ, ಕುರಗೋಡ, ತಾಃ ಬಳ್ಳಾರಿ.

**3.** ರಂಗಣ್ಣ ತಂದೆ ಸಿದ್ದಪ್ಪ ಮೆಳಗೇರಿ, ವಯಸ್ಸುಃ **50** ವರ್ಷ, ಉಃ ಕೂಲಿ, ಸಾಃ ಹೊನ್ನೂರಸ್ವಾಮಿ ದರ್ಗಾ ಹತ್ತಿರ, ಕುರಗೋಡ, ತಾಃ ಬಳ್ಳಾರಿ.

**4.** ದ್ಯಾವಮ್ಮ ತಂದೆಃ ರಮೇಶ, ವಯಸ್ಸುಃ **28** ವರ್ಷ, ಉಃ ಮನೆಗೆಲಸ, ಸಾಃ ಕುರುಗೋಡ, ತಾಃ ಬಳ್ಳಾರಿ.

**5.** ನೀಲಮ್ಮ ತಂದೆಃ ರಂಗಣ್ಣ, ವಯಸ್ಸುಃ **21** ವರ್ಷ, ಉಃ ಮನೆಗೆಲಸ, ಸಾಃ ಕಪ್ಪಗಲ್, ಸಿರವಾರ, ಜಿಃ ಬಳ್ಳಾರಿ.

**6.** ಬಸವ ತಂದೆ ರಂಗಣ್ಣ ಮೆಳಗೇರಿ, ವಯಸ್ಸುಃ **20** ವರ್ಷ, ಉಃ ಒಕ್ಕಲುತನ, ಸಾಃ ಹೊನ್ನೂರಸ್ವಾಮಿ ದರ್ಗಾ ಹತ್ತಿರ, ಕುರಗೋಡ, ತಾಃ ಬಳ್ಳಾರಿ.

**7. ಶರಣಪ್ಪ ತಂದೆ ಅಯ್ಯಪ್ಪ, ವಯಸ್ಸುಃ 48 ವರ್ಷ, ಉಃ ಒಕ್ಕಲುತನ, ಸಾಃ ಯರಡೋಣ, ತಾಃ ಕಾರಟಗಿ, ಜಿಃ ಬಳ್ಳಾರಿ.**

ವಾಸಿಗಳಾದ ನಿಮ್ಮ ಮೇಲೆ ದೋಷಾರೋಪಣೆಗೆ ಗುರಿಪಡಿಸುವ ಕ್ರಮವೇನೆಂದರೆಃ-

ಕಾರಟಗಿ ಪೋಲೀಸ್ ಠಾಣಾ ವ್ಯಾಪ್ತಿಯ ಹೊಸಜೂರಟಗಿ ಗ್ರಾಮದ ನಿವಾಸಿ ಚಾಸಾ-2 ರವರು ತಮ್ಮ ಮಗಳಾದ ಚಾಸಾ-1 ರವರನ್ನು ಈಗ್ಗೆ 4 ವರ್ಷಗಳ ಹಿಂದೆ ಆರೋಪಿ ನಂ.1 ಈತನೊಂದಿಗೆ ಮರ್ಲಾನಹಳ್ಳಿ ಗ್ರಾಮದ ಶ್ರೀ ವೆಂಕಟೇಶ್ವರ ದೇವಸ್ಥಾನದ ಸಾಮೂಹಿಕ ವಿವಾಹದಲ್ಲಿ ಹಿರಿಯರ ಸಮಕ್ಷಮದಲ್ಲಿ ಮದುವೆ ಮಾಡಿಕೊಟ್ಟಿದ್ದು, ಮದುವೆಯಾದ ನಂತರ ಚಾಸಾ-1 ರವರು ಬಾಳ್ವೆ ಮಾಡಲು ಗಂಡನ ಮನೆ ಕುರುಗೂಡಕ್ಕೆ ಹೋದಾಗ ಚಾಸಾ-1 ಮತ್ತು ಆರೋಪಿ ನಂ.1 ರವರಿಗೆ ಒಂದು ಗಂಡು ಮಗುವಾಗಿದ್ದು, ನಂತರ ಚಾಸಾ-1 ರವರ ಗಂಡ ಆರೋಪಿ ನಂ.1 ಮತ್ತು ಗಂಡನ ಮನೆಯವರಾದ ಆರೋಪಿ ನಂ.2 ರಿಂದ 7 ರವರು ಕೂಡಿಕೊಂಡು ಚಾಸಾ-1 ರವರಿಗೆ ವಿನಾಕಾರಣ ಸಣ್ಣ ಪುಟ್ಟ ಕಾರಣಗಳಿಗೆ ಮತ್ತು ಮನೆಯಲ್ಲಿ ಕೆಲಸ ಮಾಡುವ ವಿಷಯಕ್ಕೆ ಜಗಳ ತೆಗೆದು ಆಕೆಗೆ ಅಶ್ಲೀಲವಾಗಿ ಬೈದಾಡುವುದು, ಕೈಯಿಂದ ಹೊಡೆ-ಬಡೆ ಮಾಡುವುದು ಮಾಡಿ ಮನೆಯಲ್ಲಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಕೌಟುಂಬಿಕ ಕಿರುಕುಳ ಕೊಟ್ಟಿದ್ದು, ಆ ಕಿರುಕುಳ ಆಕೆಗೆ ತೀವ್ರ ನೋವು ಮತ್ತು ಆಕೆಯ ಜೀವಕ್ಕೆ ಅಪಾಯಕಾರಿಯಾಗಿದ್ದು, ಈ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ 498-ಎ ಸಹವಾಚಕ ಕಲಂ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದವೆಸಗುವ ಏಕೋದ್ದೇಶದಿಂದ ಬಂದು ಚಾ.ಸಾ-1 ರವರ ಜೊತೆ ಜಗಳ ತೆಗೆದು, ಆರೋಪಿತರಾದ ನೀವು ಚಾಸಾ-1 ರವರಿಗೆ ಕೈಗಳಿಂದ ಹೊಡೆ-ಬಡಿ ಮಾಡಿ ಸಾದಾ ಸ್ವರೂಪದ ಗಾಯ ಮಾಡಿದ್ದು, ಈ ಮೂಲಕ ಭಾ.ದಂ.ಸಂ. ಕಲಂ 323 ಸಹಕಲಂ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಬಂದು ಚಾ.ಸಾ-1 ರವರ ಜೊತೆ ಜಗಳ ತೆಗೆದು, ಆರೋಪಿ ನಂ.7 ಈತನು ಹೊಸಜೂರಟಗಿ ಗ್ರಾಮಕ್ಕೆ ಬಂದು ಚಾಸಾ-1 ರವರಿಗೆ ಅಶ್ಲೀಲವಾಗಿ ಬೈದು ಆರೋಪಿ ನಂ.1 ಇತನಿಗೆ ಇವಳೊಂದಿಗೆ ಬಾಳ್ವೆ ಮಾಡುವುದು ಬೇಡ ಊರಿಗೆ ಹೋಗಿ ಬೇರೆ ಮದುವೆ ಮಾಡಿಕೊ ಅಂತಾ ಅಂದು ಹೋಗಿದ್ದರಿಂದ ಆತನ ಮಾತು ಮತ್ತು ತಮ್ಮ ಮನೆಯವರ ಮಾತು ಕೇಳಿ ಆರೋಪಿ ನಂ.1 ಈತನು ದಿನಾಂಕಃ 26.12.2019 ರಂದು ಸಂಜೆ 6-00 ಗಂಟೆಯ ಸಮಾರಿಗೆ ಹೊಸ ಜೂರಟಗಿಯ ವಾಸದ ಮನೆಯಲ್ಲಿ ಚಾಸಾ-1 ರವರಿಗೆ ಆಕೆಯ ಗರ್ಭಿಣಿ ಇರುತ್ತಾಳೆ ಅಂತಾ ಗೊತ್ತಿದ್ದು ಆಕೆಯ ಶೀಲದ ಬಗ್ಗೆ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಭಾ.ದಂ.ಸಂ. ಕಲಂ 504 ಸಹಕಲಂ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ನಾಲ್ಕನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದವೆಸಗುವ ಏಕೋದ್ದೇಶದಿಂದ ಬಂದು ಚಾ.ಸಾ-1 ರವರ ಜೊತೆ ಜಗಳ ತೆಗೆದು, ಆರೋಪಿತರಾದ ನೀವು ಚಾಸಾ-1 ರವರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕೌಟುಂಬಿಕ ಕಿರುಕುಳ ಕೊಟ್ಟು ಜೀವದ ಬೆದರಿಕೆ ಹಾಕಿದ್ದು, ಈ ಮೂಲಕ ಭಾ.ದಂ.ಸಂ. ಕಲಂ 506 ಸಹಕಲಂ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಈ ಮೇಲ್ಕಂಡ ಆರೋಪವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ ನೀವು ಈ ನ್ಯಾಯಾಲಯದಲ್ಲಿ ಮೇಲ್ಕಂಡ ಆರೋಪಗಳಿಗೆ ವಿಚಾರಣೆಗೆ ಒಳಪಡುತ್ತೀರಿ.

ಸ್ಥಳಃ ಕಾರಟಗಿ
ದಿನಾಂಕಃ 30.06.2025

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಕಾರಟಗಿ (ಸಂಚಾರಿ ನ್ಯಾಯಾಲಯ)